## ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ

## ವಿಶೇಷಚೇತನ ಉಳ್ಳ ವ್ಯಕ್ತಿಗಳೊಂದಿಗೆ ಸಂವಹನ


| | ಶೀರ್ಷಿಕೆ | | | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–5 |
| 1 – 3 | ಅರಿವು | : | ಹೌದು ಅಥವಾ ಇಲ್ಲ? | 6–7 |
| 1 – 3 | ಅನುಭವ | : | 'ನಿನ್ನ ಮಾರ್ಗವನ್ನು ತಿಳಿ' | 7–8 |
| 1 – 3 | ಅವಲೋಕನ | : | ಕೆಲವು ಚಟುವಟಿಕೆಗಳನ್ನು ಮಾಡಿ | 9–10 |
| 4 – 5 | ಅರಿವು | : | ಅಂಗವೈಕಲ್ಯತೆ : ಒಂದು ದೌರ್ಬಲ್ಯವೇ? | 10–11 |
| 4 – 5 | ಅನುಭವ | : | ನೀವು ನೋಡುವುದನ್ನು ಹೇಳಿ ! | 12 |
| 4 – 5 | ಅವಲೋಕನ | : | ಕಥೆಯನ್ನು ರಚಿಸಿ ! | 13–14 |
| 6 – 8 | ಅರಿವು | : | ಮೊದಲ ಹೆಜ್ಜೆ – ಸ್ವೀಕರಿಸುವುದನ್ನು ಕಲಿ | 14–5 |
| 6 – 8 | ಅನುಭವ | : | ನಿಮ್ಮ ಶಾಲೆಯು ಸಮನ್ವಯ ಶಿಕ್ಷಣ ಸ್ನೇಹಿಯಾಗಿದೆಯೇ? | 16–17 |
| 6 – 8 | ಅವಲೋಕನ | : | ಬಣ್ಣವನ್ನು ಬಳಸೋಣ | 18 |
| | ಪ್ರತಿಜ್ಞೆ | | | 19 |
| | ಸಲಹಾತ್ಮಕ ಚಟುವಟಿಕೆಗಳು | | | 19 |

# ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳೊಂದಿಗೆ ಸಂವಹನ

**ಪೀಠಿಕೆ :**

ಅಂಗವೈಕಲ್ಯವು ವಿಭಿನ್ನ ದೇಶಗಳಲ್ಲಿ ವಿಭಿನ್ನ ವ್ಯಾಖ್ಯಾನಗಳನ್ನು ಹೊಂದಿರುವ ಒಂದು ಸಂಕೀರ್ಣ ಪದವಾಗಿದೆ. ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಕಾಯ್ದೆ, 2016 ರ ಅಧಿನಿಯಮದಂತೆ, ಮಾನವ ಸಂಪನ್ಮೂಲ ಇಲಾಖೆಯ ಸುತೋಲೆಯಂತೆ ಮತ್ತು ವಿಶ್ವಸಂಸ್ಥೆಯ ಆದೇಶದಂತೆ, 'ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿ' ಎಂದರೆ ಶಾಶ್ವತ ಮತ್ತು ದೀರ್ಘಾವಧಿಯ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಸಂವೇದನಾ ದೌರ್ಬಲ್ಯ ಹೊಂದಿರುವ ವ್ಯಕ್ತಿ. ಅಂಗವೈಕಲ್ಯ ವ್ಯಕ್ತಿ ಇತರರೊಂದಿಗೆ ಸಂವಹನ ನಡೆಸುವಾಗ, ಸಮಾಜವು ಅವನ ಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಯನ್ನು ತಡೆಯುತ್ತದೆ. ಅಂತಹ ವ್ಯಕ್ತಿಗಳು ಸಮಾಜದಲ್ಲಿ ಪೂರ್ಣವಾಗಿ ಭಾಗವಹಿಸಲು ವಿಶೇಷ ಸೌಲಭ್ಯಗಳ ಅಗತ್ಯವಿದೆ. ಸಮಾಜದಲ್ಲಿ ಜಾತಿ, ವರ್ಗ, ಧರ್ಮ, ಬಡತನ ಮುಂತಾದುವುಗಳನ್ನು ಆಧರಿಸಿದ ಬೇಧ ನೀತಿಗಳನ್ನು ನಿಯಂತ್ರಿಸಲು ಸಾಕಷ್ಟು ಸುಧಾರಣೆಗಳನ್ನು ಕೈಗೊಂಡಿದ್ದರೂ ಅಂಗವೈಕಲ್ಯತೆ ಹೊಂದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಗುರುತರ ಜವಾಬ್ದಾರಿಯೂ ನಮ್ಮ ಮೇಲಿದೆ. ಅಂಗವೈಕಲ್ಯತೆ ಎಂಬ ಪದದ ಹಣೆಪಟ್ಟಿ ನೀಡುವುದರಿಂದ ಅವರಿಗೆ ಆಗುವ ಮಾನಸಿಕ ಹಿಂಸೆಯನ್ನು ತಡೆಯಲು ಅವರನ್ನು ವಿಶೇಷ ಅಗತ್ಯತೆಯುಳ್ಳ ಮಕ್ಕಳು ಎಂದು ಕರೆಯಲಾಗುತ್ತದೆ. ಮಕ್ಕಳ ಹಕ್ಕು ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ 2009 ರ ಅಡಿಯಲ್ಲಿ 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯ ಶಿಕ್ಷಣಕ್ಕೆ ಅರ್ಹರಾಗಿದ್ದು ಶಾಲೆಗಳ ತರಗತಿ ಕೋಣೆಗಳಲ್ಲಿ ಇಂತಹ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ, ಸಾಮಾನ್ಯ ವಿದ್ಯಾರ್ಥಿಗಳು ಹಾಗೂ ವಿಶೇಷ ಅಂಗವೈಕಲ್ಯತೆಯುಳ್ಳ ವಿದ್ಯಾರ್ಥಿಗಳೊಂದಿಗೆ ಆರೋಗ್ಯಕರ ಮತ್ತು ಅರ್ಥಪೂರ್ಣ ಸಂಬಂಧವನ್ನು ಬೆಳೆಸಿಕೊಂಡು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಪರಸ್ಪರ ತೊಡಗಿಸಿಕೊಳ್ಳುವಂತೆ ತರಗತಿಯಲ್ಲಿ ಶಿಕ್ಷಕರು ಅವಕಾಶಗಳನ್ನು ಸೃಷ್ಟಿಸಬೇಕಿದೆ.

ಮಕ್ಕಳು ಕರಗತ ಮಾಡಿಕೊಳ್ಳಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಹಾಗೂ ಕಲಿಕಾ ಫಲಿತಗಳನ್ನು ಆಧರಿಸಿ ಈ ಕೈಪಿಡಿಯನ್ನು ರಚಿಸಲಾಗಿದೆ. ಈ ಕೈಪಿಡಿಯು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿದೆ.

1) ಅರಿವು

2) ಅನುಭವ

3) ಅವಲೋಕನ/ಪ್ರತಿಫಲನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್ ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಕೈಪಿಡಿಯನ್ನು ಸಂರಚಿಸಲಾಗಿದೆ. ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ

ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನವನ್ನು ತರಗತಿ ಕೋಣೆ ಮತ್ತು ಮೈದಾನಗಳಲ್ಲಿ ನೀಡಬೇಕಾಗಿದೆ.

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಒಂದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆ ಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ/ನಾಯಕ/ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ವಿಕಲಚೇತನ ಮಕ್ಕಳನ್ನು ಒಳಗೊಂಡಂತೆ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸವಾದ ವಾತಾವರಣವಿರುವುದನ್ನು ಖಚಿತ ಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗಲು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

ಚಟುವಟಿಕೆಗಳನ್ನು ಎಲ್ಲಾ ವಯಸ್ಸಿನ ಮಕ್ಕಳು ನಿರ್ವಹಿಸಬಹುದು. ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಪಡೆಯಲು ಮಕ್ಕಳು ಎಷ್ಟು ಸಾಧ್ಯವೋ ಅಷ್ಟು ಚಟುವಟಿಕೆಗಳನ್ನು ನಿರ್ವಹಿಸುವುದು ಸೂಕ್ತವಾಗಿದೆ.

# ವಿಶೇಷ ಅಗತ್ಯತೆಯುಳ್ಳ ಮಕ್ಕಳೊಂದಿಗೆ ಸಂವಹನ

**ಹಲೋ ಮಕ್ಕಳೇ,**

ನೀವು ವಾಂಗಿಬಾತ್ ಇಷ್ಟಪಡುವುದಾದರೆ ಕೈ ಎತ್ತಿ. ನೀವು ಕಪ್ಪು ಕಣ್ಣುಗಳನ್ನು ಹೊಂದಿದ್ದರೆ ನಿಮ್ಮ ಕೈಗಳನ್ನು ಮೇಲಕ್ಕೆತ್ತಿ. ನೀವು ತಿಳಿ ಕಂದು ಬಣ್ಣದ ಕೂದಲನ್ನು ಹೊಂದಿದ್ದರೆ ನಿಮ್ಮ ಕೈಗಳನ್ನು ಮೇಲಕ್ಕೆತ್ತಿ. ನೀವು ಚಾಕೊಲೇಟ್ಗಳನ್ನು ಬಯಸಿದರೆ ನಿಮ್ಮ ಕೈಗಳನ್ನು ಮೇಲಕ್ಕೆತ್ತಿ. ಹೀಗೆ ನಾವೆಲ್ಲರೂ ವಿಭಿನ್ನ ಅಭಿರುಚಿಗಳು, ನೋಟಗಳು, ಆಸಕ್ತಿ ಮತ್ತು ಅನಾಸಕ್ತಿಗಳನ್ನು ಹೊಂದಿರುವುದನ್ನು ಗಮನಿಸಿದ್ದೀರಾ? ವಿಭಿನ್ನವಾಗಿ ಕಾಣುವ, ವಿಭಿನ್ನವಾಗಿ ಮಾತನಾಡುವ, ವಿಭಿನ್ನವಾಗಿ ನಡೆಯುವ ಮಕ್ಕಳು ನಮ್ಮಂತೆಯೇ ಆಸಕ್ತಿ ಮತ್ತು ಅನಾಸಕ್ತಿಗಳನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ?

ನೋಡಲು ವಿಭಿನ್ನವಾಗಿರುವ, ಆದರೆ ನಮ್ಮಂತೆಯೇ ಇರುವ–ವಿಶೇಷ ಅಗತ್ಯತೆಯುಳ್ಳ ಮಕ್ಕಳ ಗುಂಪಿನ ಬಗ್ಗೆ ಮಾತನಾಡೋಣ.



ಅಂಗವೈಕಲ್ಯವು ವಿದ್ಯಾರ್ಥಿಯ ಸಾಮರ್ಥ್ಯಗಳನ್ನು ಹಂತ ಹಂತವಾಗಿ ಬೆಳೆಸುವ ಮತ್ತು ಸೀಮಿತಗೊಳಿಸುವ ದೈಹಿಕ ಮತ್ತು ಮಾನಸಿಕ (ಇಂದ್ರಿಯಗಳು) ಸ್ಥಿತಿಯಾಗಿದೆ. ಗಾಲಿಕುರ್ಚಿಗಳು ಅಥವಾ ಶ್ರವಣ ಸಾಧನ ಹೊಂದಿರುವ ವಿದ್ಯಾರ್ಥಿಗಳು ನಮ್ಮಂತೆಯೇ ಆಸಕ್ತಿ ಮತ್ತು ಅನಾಸಕ್ತಿಗಳನ್ನು ಹೊಂದಿರುತ್ತಾರೆ. ನಾವು ಬಲೂನ್‌ಗಳಂತೆ. ಎಲ್ಲವೂ ವಿಭಿನ್ನ ಬಣ್ಣಗಳಿಂದ ಕೂಡಿದ್ದರೂ ಒಳಗೆ ಒಂದೇ ಗಾಳಿಯನ್ನು ಹೊಂದಿರುತ್ತವೆ. ಈ ವ್ಯತ್ಯಾಸಗಳು ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಇತರರಂತೆ ವಿಶೇಷವಾಗಿಸುತ್ತವೆ.

ಎಲ್ಲಾ ವಿಧದ ಅಂಗವಿಕಲತೆಗಳನ್ನು ನಮ್ಮ ಕಣ್ಣಿನಿಂದ ನೋಡಲಾಗುವುದಿಲ್ಲ. ಉದಾ : ನಿರ್ದಿಷ್ಟ ಕಲಿಕಾನ್ಯೂನತೆ ಮತ್ತು ಸೌಮ್ಯ ಮಟ್ಟದ ಬುದ್ಧಿ ನ್ಯೂನತೆಯಿಂದ ಕೂಡಿರುವ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಮೇಲ್ನೋಟದಿಂದ ಗುರುತಿಸಲು ಸಾಧ್ಯವಿಲ್ಲ. ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಪ್ರೀತಿ, ಕಾಳಜಿ ಮತ್ತು ಗೌರವ ಸಹಕಾರ ಮತ್ತು ಸಹಭಾಗಿತ್ವ ನೀಡಿದರೆ ಇತರರಂತೆ ಚಟುವಟಿಕೆಗಳನ್ನು ಮಾಡಲು ಸಮರ್ಥರಾಗಿರುತ್ತಾರೆ.



ದೂರದರ್ಶನ ಸುದ್ದಿ ಚಾನೆಲ್‌ಗಳಲ್ಲಿ ಸಂಜ್ಞೆ ಭಾಷೆಯ ಮೂಲಕ ಸುದ್ದಿ ಹೇಳುವುದನ್ನು ನೀವು ನೋಡಿದ್ದೀರಾ?

ನಾವು ಮಾತನಾಡುವ ಭಾಷೆಯನ್ನು ಮಾತನಾಡಲು ಸಾಧ್ಯವಾಗದ ಅನೇಕ ಮಕ್ಕಳಿದ್ದಾರೆ. ಇಂತಹ ಶ್ರವಣ ನ್ಯೂನತೆ ಇರುವ ಮಕ್ಕಳು ತಮ್ಮದೇ ಆದ ಸಂಕೇತ ಭಾಷೆಯ ಇನ್ನೊಂದು ಭಾಷೆಯನ್ನು ಬಳಸುತ್ತಾರೆ. ಅದರೆ ಎಲ್ಲಾ ಪ್ರದೇಶಗಳಲ್ಲಿ, ಎಲ್ಲಾ ಸ್ಥಳಗಳಲ್ಲಿ ಸಮಾಜದಲ್ಲಿ ಎಲ್ಲಾ ವ್ಯಕ್ತಿಗಳೊಂದಿಗೆ ಮಾತನಾಡಲು ಸಂಜ್ಞೆ

ಭಾಷೆಯು ಲಭ್ಯವಿರುವುದಿಲ್ಲ. ಆದ್ದರಿಂದ ಶ್ರವಣ ನ್ಯೂನತೆ ಇರುವ ಮಕ್ಕಳಿಗೆ ಶ್ರವಣ ಸಾಧನಗಳ ಮೂಲಕ ಅಕ್ಷರಗಳು, ಶಬ್ದಗಳು ಮತ್ತು ವಾಕ್ಯಗಳನ್ನು ಉಚ್ಚಾರಣೆ ಮಾಡುವ ತರಬೇತಿ ನೀಡುವುದರ ಮೂಲಕ ಮಕ್ಕಳನ್ನು ಮುಖ್ಯ ವಾಹಿನಿಗೆ ತರಬೇಕಾಗಿದೆ.ಸಂಜ್ಞೆ ಭಾಷೆ ಕಲಿಯಲು ಒತ್ತಾಯ ಮಾಡದಂತೆ ಕಲಿಯಲು ಮತ್ತು ಮಾತನಾಡಲು ಪ್ರೇರೇಪಿಸಬೇಕು ಮತ್ತು ದೃಷ್ಟಿ ನ್ಯೂನತೆಯಿರುವ ಮಕ್ಕಳಿಗೆ ಸಹಾಯಕರ, ಬರಹಗಾರರ ಸೌಲಭ್ಯವನ್ನು, ಮಾತನಾಡುವ ಲ್ಯಾಪ್‌ಟಾಪ್ ಒದಗಿಸುವ ಮೂಲಕ, ದೃಕ್ ಶ್ರವಣೋಪಕರಣಗಳ ಮೂಲಕ ಕಲಿಯಲು ಅವಕಾಶ ನೀಡಿ ಸಂಜ್ಞೆ ಮತ್ತು ತುಟಿ ಚಲನೆ ಒಳಗೊಂಡಿರುವಂತೆ ನಿರ್ದೇಶನ ನೀಡಬೇಕು. ನಮ್ಮ ಭಾಷೆಯಂತೆ, ಸಂಕೇತ ಭಾಷೆಯು ಪ್ರತಿಯೊಂದು ಉಚ್ಚಾರಾಂಶಕ್ಕೂ ವಿಭಿನ್ನ ತುಟಿ ಚಲನೆಯನ್ನು ಹೊಂದಿದೆ. ಸಾರ್ವತ್ರಿಕ ಸಂಕೇತ ಭಾಷೆ ಇಲ್ಲದೆ, ಪ್ರಪಂಚದಾದ್ಯಂತ ವಿಭಿನ್ನ ಸಂಕೇತ ಭಾಷೆಗಳನ್ನು ಬಳಸಲಾಗುತ್ತದೆ.



ನೋಡಲು ಸಾಧ್ಯವಾಗದ ಮಕ್ಕಳು, ಶಿಕ್ಷಕರು ವಿಜ್ಞಾನಿಗಳಾಗುವುದು ಹೇಗೆ ಎಂದು ನೀವು ಎಂದಾದರೂ ಯೋಚಿಸಿದ್ದೀರಾ?

ಶಾಲೆಗಳಲ್ಲಿ ದೃಷ್ಟಿ ನ್ಯೂನತೆ ಇರುವ ಮಕ್ಕಳಿಗೆ ಸಹಾಯಕರನ್ನು ಒದಗಿಸಿ ಅಥವಾ ಬರಹಗಾರರ ಸೌಲಭ್ಯವನ್ನು ಒದಗಿಸುವುದರ ಮೂಲಕ, ಟಾಕಿಂಗ್ ಲ್ಯಾಪ್ ಟಾಪ್, ಟೇಪ್ ರಿಕಾರ್ಡರ್, ಟಾಕಿಂಗ್ ವಾಚ್ ಗಳ ಮೂಲಕ ಮಕ್ಕಳನ್ನು ಮುಖ್ಯ ವಾಹಿನಿಗೆ ತರಬೇಕಿದೆ.

ನಾವೆಲ್ಲರೂ ಇಂಗ್ಲಿಷ್, ಕನ್ನಡ, ಹಿಂದಿ ಮತ್ತು ಉರ್ದು ಭಾಷೆಗಳನ್ನು ಕಲಿಯುತ್ತಿದ್ದೇವೆ, ಏಕೆಂದರೆ ಅಕ್ಷರಗಳನ್ನು ನಮ್ಮ ಕಣ್ಣಿನಿಂದ ನೋಡಬಹುದು. ನೋಡಲು ಸಾಧ್ಯವಾಗದ ಮಕ್ಕಳು, ಬರೆಯಲು ಮತ್ತು ಓದಲು ಬ್ರೈಲ್ ಲಿಪಿಯನ್ನು ಅಥವಾ ಓದುಗರ, ಬರಹಗಾರರ ಸೌಲಭ್ಯವನ್ನು ಬಳಸುತ್ತಾರೆ. ಬ್ರೈಲ್ ಲಿಪಿ ಉಬ್ಬಾಗಿರುವ ದಪ್ಪನಾದ ಚುಕ್ಕೆಗಳಾಗಿದ್ದು ಉಬ್ಬು ಚಿತ್ರಗಳನ್ನು ಬೆರಳುಗಳಿಂದ ಅನುಭವಿಸಬಹುದು.








ಇಂದು, ನಾವು ಅನೇಕ ಮೋಜಿನ ಚಟುವಟಿಕೆಗಳ ಮೂಲಕ ಕೆಲವು ಪ್ರಮುಖ ವಿಷಯಗಳನ್ನು ಕಲಿಯೋಣ.

**ಇಂದು ನೀವು**

- ಭಾಷೆ, ಧರ್ಮ, ಲಿಂಗ ಅಥವಾ ಸಮುದಾಯದಂತೆ ಅಂಗವೈಕಲ್ಯತೆಯನ್ನೂ ವೈವಿಧ್ಯತೆಯ ಮತ್ತೊಂದು ರೂಪವಾಗಿ ಅರ್ಥೈಸಿಕೊಳ್ಳುವಿರಿ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳ ಜೀವನದ ಮೇಲೆ ಸಮಾಜವು ಪ್ರಭಾವ ಬೀರುತ್ತದೆ ಎಂಬುದನ್ನು ಗುರುತಿಸುವಿರಿ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಋಣಾತ್ಮಕ ದೃಷ್ಟಿಯಿಂದ ಕಾಣುವುದನ್ನು ಪ್ರಶ್ನಿಸುವಿರಿ.

ಅಂಗವೈಕಲ್ಯ ಹೊಂದಿರುವ ಮಕ್ಕಳು ಮತ್ತು ಅವರ ಜೀವನದ ಬಗ್ಗೆ ಹೆಚ್ಚಿನ ಅರಿವು ಪಡೆಯೋಣ.

# ಹೌದು ಅಥವಾ ಇಲ್ಲ ?

| | ಹೌದು | ಇಲ್ಲ |
|---|---|---|
| ನೀವು ಬೇರೊಬ್ಬರಿಂದ ಅಂಗವೈಕಲ್ಯವನ್ನು ಪಡೆಯಬಹುದು |  |  |
| ಅಂಥ ಮಕ್ಕಳಿಗೆ ಓದಲು ಸಾಧ್ಯವಿಲ್ಲ |  |  |
| ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಹಕಾರ ನೀಡಲು ಸಾಧನ ಸಲಕರಣೆಗಳು ಬೇಕಾಗಬಹುದು |  |  |
| ಮಾತನಾಡಲು ಸಾಧ್ಯವಾಗದ ಮಕ್ಕಳು ಚಾಣಾಕ್ಷರಲ್ಲ |  |  |
| ಶಾಲೆ ಎಂದರೆ ನಡೆಯಲು, ಮಾತನಾಡಲು ಮತ್ತು ಕಲಿಯಲು ಸಾಧ್ಯವಾಗುವ ಮಕ್ಕಳಿಗೆ ಮಾತ್ರ |  |  |
| ಗಾಲಿಕುರ್ಚಿಗಳು, ಊರುಗೋಲು, ಕ್ಯಾಲಿಪರ್ಸ್ ಬಳಸುವ ಮಕ್ಕಳು ಆಟವಾಡುವುದಿಲ್ಲ |  |  |
| ಮಾತನಾಡಲು ಸಾಧ್ಯವಾಗದ ಮಕ್ಕಳೊಂದಿಗೆ ನೀವು ಸ್ನೇಹಿತರಾಗಬಹುದು |  |  |


**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳಿಗೆ ಅಭ್ಯಾಸ ಹಾಳೆಗಳು ಮತ್ತು ಪೆನ್ / ಪೆನ್ಸಿಲ್ / ಕ್ರೆಯೋನ್ ಗಳನ್ನು ಒದಗಿಸಿ.
- ಮಕ್ಕಳು ಹೇಳಿಕೆಯನ್ನು ಒಪ್ಪಿದರೆ ಸಂತೋಷದ ಮುಖವನ್ನು ಮತ್ತು ಒಪ್ಪದಿದ್ದರೆ ದುಃಖದ ಮುಖವನ್ನು ಗುರುತಿಸಲು ತಿಳಿಸಿ.
- ಹೇಳಿಕೆಗಳನ್ನು ಒಂದೊಂದಾಗಿ ಓದಿ ಮತ್ತು ಅವರು ಗುರುತಿಸಲು ಅವಕಾಶ ನೀಡಿ. ಮುಗಿಸುವವರೆಗೆ ಕಾಯಿರಿ.
- ಯಾವುದೇ ರೀತಿಯ ತೀರ್ಪು ನೀಡದಂತೆ ನೋಡಿಕೊಳ್ಳಿ. ಅವರ ಆಲೋಚನೆಗಳ ಕುರಿತು ಚರ್ಚೆಯನ್ನು ಆರಂಭಿಸಲು ಈ ಚಟುವಟಿಕೆಯನ್ನು ಒಂದು ಸಾಧನವಾಗಿ ಬಳಸಿಕೊಳ್ಳಿ.
- ವಿದ್ಯಾರ್ಥಿಗಳು ತಮ್ಮ ಉತ್ತರಗಳ ಮೂಲಕ ಯಾವುದೇ ರೀತಿಯ ತಾರತಮ್ಯವನ್ನು ತೋರಿಸಲು ಒಲವು ತೋರಿದರೆ, ವಿಶೇಷ ಅಗತ್ಯತೆಯುಳ್ಳ ಮಕ್ಕಳು ಸಹ ಇತರರಂತೆ ಎಂಬುದನ್ನು ಚರ್ಚೆಯ ಮೂಲಕ ಮಕ್ಕಳಿಗೆ ಮನದಟ್ಟು ಮಾಡಿಸಿ.

**ವಿಶೇಷ ಅಗತ್ಯತೆಯುಳ್ಳ ಮಕ್ಕಳು ಎದುರಿಸುವ ಸವಾಲುಗಳನ್ನು ಅನುಭವಿಸಲು ಪ್ರಯತ್ನಿಸೋಣ ಬನ್ನಿ!**

**ತರಗತಿ 1–3 :** **ಅನುಭವ** **(60 ನಿಮಿಷಗಳು)**

## ‘ನಿನ್ನ ಮಾರ್ಗವನ್ನು ತಿಳಿ’



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮುಂಚಿತವಾಗಿಯೇ ಚಟುವಟಿಕೆಗೆ ಅವಶ್ಯಕವಾಗಿರುವ ದುಪಟ್ಟಾಗಳು, ಇಯರ್ ಫೋನ್‌ಗಳು (ಕರ್ಣವಾಣಿ), ಚೆಂಡು ಮತ್ತು ಹಗ್ಗಕ್ಕಾಗಿ ವ್ಯವಸ್ಥೆ ಮಾಡಿ.
- ತರಗತಿಯಲ್ಲಿ ಪೀಠೋಪಕರಣಗಳನ್ನು ಅಸ್ತವ್ಯಸ್ತವಾಗಿರುವಂತೆ ಜೋಡಿಸಿ ಅಥವಾ ಪರಿಚಯವಿಲ್ಲದ ಜಾಗದಲ್ಲಿ ಚಟುವಟಿಕೆಯನ್ನು ನಡೆಸಿ.
- ಗುಂಪನ್ನು ನಾಲ್ಕು ಉಪ–ಗುಂಪುಗಳಾಗಿ ವಿಂಗಡಿಸಿ.
  - ಒಂದು ಗುಂಪಿನ ಒಬ್ಬ ಅಥವಾ ಇಬ್ಬರು ವಿದ್ಯಾರ್ಥಿಗಳಿಗೆ ಇಯರ್ ಫೋನ್‌ಗಳನ್ನು (ಕರ್ಣವಾಣಿ) ನೀಡಿ ಅದನ್ನು ಬಳಸಿ ಅವರ ಸ್ನೇಹಿತರೊಂದಿಗೆ ಸಂವಾದ ನಡೆಸಲು ತಿಳಿಸಿ.
  - ಎರಡನೇ ಗುಂಪನ್ನು ತರಗತಿಯಿಂದ ಸ್ವಲ್ಪ ದೂರದಲ್ಲಿರುವ ಪ್ರದೇಶಕ್ಕೆ ಕರೆದೊಯ್ಯಿರಿ. ಕೆಲವು ವಿದ್ಯಾರ್ಥಿಗಳಿಗೆ ದುಪಟ್ಟಾಗಳನ್ನು ಕಣ್ಣಿಗೆ ಕಟ್ಟಿಕೊಳ್ಳಲು ಹೇಳಿ ಹಾಗೂ ತರಗತಿಗೆ ಹೋಗುವ ದಾರಿಯನ್ನು ಕಂಡುಕೊಳ್ಳಲು ತಿಳಿಸಿ.
  - ಮೂರನೇ ಗುಂಪಿನ ವಿದ್ಯಾರ್ಥಿಗಳು ಮಾತನಾಡದೇ ಅಭಿನಯದ ಮೂಲಕ ಉಳಿದವರಿಗೆ ಕಥೆಯನ್ನು ಹೇಳಲು ತಿಳಿಸಿ. ಅದರಂತೆ ಎಲ್ಲಾ ಮಕ್ಕಳು ಪ್ರದರ್ಶನ ನೀಡಲು ಅವಕಾಶ ಸಿಗಲಿ.
  - ನಾಲ್ಕನೇ ಗುಂಪಿನ ಮಕ್ಕಳು ಹಗ್ಗವನ್ನು ಬಳಸಿ ತಮ್ಮ ಒಂದು ತೋಳನ್ನು ಕಟ್ಟಿಕೊಳ್ಳಲು ತಿಳಿಸಿ. ಇನ್ನೊಂದು ತೋಳನ್ನು ಮಾತ್ರ ಬಳಸಿ ತಮ್ಮ ಬೂಟಿನ ಲೇಸ್ ಗಳನ್ನು ಕಟ್ಟಿಕೊಳ್ಳುವ ಅಥವಾ ಒಂದು ತೋಳನ್ನು ಬಳಸಿ 'ಚೆಂಡನ್ನು ಹಿಡಿಯುವಂತಹ' ವಿವಿಧ ಕೆಲಸಗಳನ್ನು ಅವರು ಮಾಡಲಿ.
- ವಿದ್ಯಾರ್ಥಿಗಳು ಚಟುವಟಿಕೆಯನ್ನು ನಿರ್ವಹಿಸುವಾಗ ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಿ.
- ಒಂದು ಗುಂಪು ಚಟುವಟಿಕೆಯನ್ನು ಮಾಡುವಾಗ ಇತರರು ಚಟುವಟಿಕೆಯಲ್ಲಿ ಭಾಗವಹಿಸದಿದ್ದರೆ ಎಚ್ಚರಿಕೆಯಿಂದ ಗಮನಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಿ.
- **ಈ ಕೆಳಗಿನ ಪ್ರಶ್ನೆಗಳ ಬಗ್ಗೆ ಚರ್ಚಿಸಿ :**

**ನಿಮ್ಮ ಅನುಭವ ಹೇಗಿತ್ತು?**

- ಕಣ್ಣು ಮುಚ್ಚಿದ ವಿದ್ಯಾರ್ಥಿಗಳ ನಡುವೆ ಯಾವುದೇ ಸಮಾನತೆಗಳನ್ನು ನೀವು ಗಮನಿಸಿದ್ದೀರಾ? ಅವರು ತಮ್ಮ ದಾರಿಯನ್ನು ಹೇಗೆ ಕಂಡುಕೊಳ್ಳುತ್ತಿದ್ದರು?
- ನಿಮ್ಮ ಶಾಲೆಯಲ್ಲಿ ಮಾತು ಮತ್ತು ಭಾಷಾ ಸಂವಹನ ನ್ಯೂನತೆ ಮತ್ತು ಶ್ರವಣದೋಷವುಳ್ಳ ಮಕ್ಕಳು ಎದುರಿಸಬಹುದಾದ ಸವಾಲುಗಳ ಬಗ್ಗೆ ನೀವು ಯೋಚಿಸಬಹುದೇ?
- ನಿಮ್ಮ ಎರಡೂ ತೋಳುಗಳನ್ನು ಕಟ್ಟಿದ್ದರೆ ಅದು ಹೇಗಿರುತ್ತದೆ? ನಿಮ್ಮ ದೈನಂದಿನ ಚಟುವಟಿಕೆಗಳನ್ನು ನೀವು ಹೇಗೆ ಮಾಡುತ್ತೀರಿ?
- ಹೀಗೆ ಅಂಗವೈಕಲ್ಯ ಹೊಂದಿರುವವರಿಗೆ ಸಹಾಯ ಮಾಡಲು ನೀವು ಏನು ಮಾಡಬಹುದು?
- ದೃಷ್ಟಿಹೀನರಿಗೆ ಬ್ರೈಲ್ ಭಾಷೆ ಮತ್ತು ವಿವಿಧ ವಿಕಲಾಂಗರಿಗೆ ಇತರ ಸಹಾಯಕ ಸಾಧನಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಿ.

ವಿಕಲಾಂಗ ಮಕ್ಕಳು ಎದುರಿಸುವ ಸವಾಲುಗಳನ್ನು ಅನುಭವಿಸಿದ ನಂತರ,
ಕಲಿಕೆಯ ಕುರಿತು ಕೆಲವು ಚಿಂತನೆಗಳನ್ನು ನಡೆಸೋಣ......

ತರಗತಿ 1–3 : ಅವಲೋಕನ (60 ನಿಮಿಷಗಳು)

## ಕೆಲವು ಚಟುವಟಿಕೆಗಳನ್ನು ಮಾಡಿ...



**ದೃಷ್ಟಿನ್ಯೂನತೆ**



**ಮಾತು ಮತ್ತು ಭಾಷಾ ಸಂವಹನ ನ್ಯೂನತೆ ಹಾಗೂ ಶ್ರವಣ ನ್ಯೂನತೆ**



**ದೈಹಿಕ ನ್ಯೂನತೆ**

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮಕ್ಕಳನ್ನು 3–4 ಗುಂಪುಗಳಾಗಿ ಮಾಡಿ.
- ಪ್ರತಿ ಗುಂಪಿಗೂ ಒಂದೊಂದು ವಿಕಲತೆಯ ವಿಷಯವನ್ನು ನೀಡಿ.
- ಅವರಿಗೆ ನೀಡಿರುವ ವಿಕಲತೆಯ ಕುರಿತು ಎಲ್ಲಾ ಮಕ್ಕಳು ಸೇರಿ ಆಡುವಂತಹ ಆಟಗಳನ್ನು ಅಭಿವೃದ್ಧಿಪಡಿಸಲು ತಿಳಿಸಿ. ಕ್ರಿಕೆಟ್, ಫುಟ್ ಬಾಲ್ ನಂತಹ ಜನಪ್ರಿಯ ಆಟಗಳನ್ನು ಸಮನ್ವಯ ಶಿಕ್ಷಣ ಸ್ನೇಹಿ ಮಾಡುವ ನಿಟ್ಟಿನಲ್ಲಿ ಯೋಚಿಸಲು ಪ್ರೋತ್ಸಾಹಿಸಿ.
- ಆ ಆಟವನ್ನು ಅವರು ಆಡಲು ಅವಕಾಶ ನೀಡಿ.
- ಚಟುವಟಿಕೆಯ ನಂತರ ಕೆಳಕಂಡ ಪ್ರಶ್ನೆಗಳ ಮೂಲಕ ಚರ್ಚೆಯನ್ನು ಮಾಡಿ:
  - ಅವಕಾಶಗಳನ್ನು ಒದಗಿಸಿದಾಗ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಇತರರಂತೆ ಆಡಬಹುದು ಹೇಗೆ?
  - ಸಮರ್ಪಕ ಸಹಕಾರ ನೀಡಿದಾಗ ಅಂಗವಿಕಲತೆಯನ್ನು ಹೇಗೆ ನಿವಾರಿಸಬಹುದು?

**ತರಗತಿ 4–5 :** **ಅರಿವು** **(60 ನಿಮಿಷಗಳು)**

# ಅಂಗವೈಕಲ್ಯತೆ : ಒಂದು ದೌರ್ಬಲ್ಯವೇ ?

### ದೈಹಿಕ ಅಂಗವೈಕಲ್ಯತೆ

ಕೆಲವೊಮ್ಮೆ ನಮ್ಮ ದೇಹದ ವಿವಿಧ ಭಾಗಗಳು ಕಾರ್ಯ ನಿರ್ವಹಿಸುವುದಿಲ್ಲ . ಕೆಲವರಿಗೆ ಹುಟ್ಟಿನಿಂದಲೇ ದೇಹದ ಕೆಲವು ಭಾಗಗಳು ನ್ಯೂನತೆಗಳನ್ನು ಹೊಂದಿರುತ್ತವೆ ಮತ್ತು ಕೆಲವರು ಅಪಘಾತಗಳಿಂದ ಆಗುವ ಗಾಯಗಳಿಂದ ಗುಣಪಡಿಸಲು ಸಾಧ್ಯವಾಗದೆ ಅಂಗವೈಕಲ್ಯತೆಯನ್ನು ಹೊಂದುತ್ತಾರೆ. ಇದರಿಂದಾಗಿ ಕೆಲವರು ಗಾಲಿಕುರ್ಚಿಗಳನ್ನು ಬಳಸುತ್ತಾರೆ. ಅಂತಹವರು ಹೆಚ್ಚು ಸಮಯ ತೆಗೆದುಕೊಂಡರೂ ಖಂಡಿತವಾಗಿಯೂ ಇತರರಂತೆ ದೈನಂದಿನ ಚಟುವಟಿಕೆಗಳನ್ನು ಮಾಡಲು ಸಾಧ್ಯವಿದೆ.

### ದೃಷ್ಟಿ ನ್ಯೂನತೆ

ಕೆಲವರಲ್ಲಿ ಕಣ್ಣುಗಳು ನಿರ್ದಿಷ್ಟ ಕಾರ್ಯಗಳನ್ನು ಸಮರ್ಪಕವಾಗಿ ಮಾಡುವುದಿಲ್ಲ. ಅಲ್ಪದೃಷ್ಟಿ ಅಥವಾ ಅಂಧತ್ವದಿಂದಾಗಿ ದೈನಂದಿನ ಚಟುವಟಿಕೆಗಳನ್ನು ಮಾಡಲು ಕಷ್ಟಪಡುತ್ತಾರೆ. ಕೆಲವರಿಗೆ ಚಿಕ್ಕ ಅಕ್ಷರಗಳನ್ನು ಹೊಂದಿರುವ ಪುಸ್ತಕಗಳನ್ನು ಓದಲು ಆಗದೇ ದಪ್ಪ ಮಸೂರಗಳನ್ನೊಳಗೊಂಡ ಕನ್ನಡಕಗಳನ್ನು ಬಳಸುತ್ತಾರೆ. ಏನೂ ನೋಡಲಾಗದವರಿಗೆ, ನಡೆಯಲು ವಾಕಿಂಗ್ ಸ್ಟಿಕ್ (ವೈಟ್ ಕೇನ್), ಓದಲು ಮತ್ತು ಬರೆಯಲು ಬ್ರೈಲ್ ಲಿಪಿಯ ಅಗತ್ಯವಿದೆ. ಇದು ಹುಟ್ಟಿನಿಂದಲೇ ಇರಬಹುದು ಅಥವಾ ಆರೋಗ್ಯ ಸಮಸ್ಯೆಗಳಿಂದ ಅಥವಾ ಅಪಘಾತಗಳಿಂದಾಗಿ ಉಂಟಾಗಿರಬಹುದು.

## ಮಾತು ಮತ್ತು ಭಾಷಾ ಸಂವಹನ ನ್ಯೂನತೆ

ಕೆಲವರಿಗೆ ಸ್ಪಷ್ಟವಾಗಿ ಮಾತನಾಡಲು ಕಷ್ಟವಾಗುತ್ತದೆ. ಕೆಲವರು ತೊದಲಬಹುದು ಅಥವಾ ಕೆಲವರಿಗೆ ಮಾತನಾಡಲು ಸಾಧ್ಯವಿಲ್ಲದಿರಬಹುದು. ಇತರರೊಂದಿಗೆ ಸಂವಹನ ನಡೆಸಲು ಅವರಿಗೆ ಚಿತ್ರಗಳು ಅಥವಾ ಸಂಕೇತ ಭಾಷೆ ಬೇಕಾಗಬಹುದು. ಇದು ಹುಟ್ಟಿನಿಂದ ಬಂದಿರಬಹುದು ಅಥವಾ ನರವ್ಯೂಹದ ತೊಂದರೆಯಿಂದಾಗಿ ಅಥವಾ ಆರೋಗ್ಯ ಸಮಸ್ಯೆಗಳಿಂದ ಬಂದಿರಬಹುದು.

## ನಿರ್ದಿಷ್ಟ ಕಲಿಕಾ ನ್ಯೂನತೆ


ಕೆಲವರ ಮೆದುಳು ವಿಭಿನ್ನವಾಗಿ ಕಾರ್ಯನಿರ್ವಹಿಸುವುದರಿಂದ ಹೊಸ ವಿಷಯಗಳನ್ನು ಕಲಿಯಲು ಕಷ್ಟಪಡುತ್ತಾರೆ. ಅವರು ಇತರರಂತೆಯೇ ಜಾಣರಾದರೂ ಕಲಿಯಲು ವಿಭಿನ್ನ ತಂತ್ರಗಳ ಸಹಾಯ ಬೇಕಾಗುತ್ತದೆ. ಗಣಿತದಲ್ಲಿ, ಬರವಣಿಗೆ ಯಲ್ಲಿ, ಓದುವಿಕೆಯಲ್ಲಿ ಅಥವಾ ಇತರೆ ವಿಷಯಗಳಲ್ಲಿ ಕಲಿಕಾ ನ್ಯೂನತೆಗಳು ಸಂಭವಿಸಬಹುದು.

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮೇಲ್ಕಂಡ ಕಾರ್ಡುಗಳನ್ನು ಸಿದ್ಧಮಾಡಿ ಇಟ್ಟುಕೊಳ್ಳಿ.
- ಮಕ್ಕಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡಿ.
- ಅಂಗವೈಕಲ್ಯತೆಯ/ನ್ಯೂನತೆಯ ಹೆಸರಿರುವ ಒಂದೊಂದು ಕಾರ್ಡನ್ನು ಒಂದೊಂದು ಗುಂಪಿಗೆ ಕೊಡಿ.
- ಕೆಳಕಂಡ ಪ್ರಶ್ನೆಗಳ ಹಿನ್ನೆಲೆಯಲ್ಲಿ ತಮಗೆ ನೀಡಿರುವ ಅಂಗವೈಕಲ್ಯತೆಯ ಕುರಿತು ಚರ್ಚಿಸಲು 10 ನಿಮಿಷ ಕಾಲಾವಕಾಶ ನೀಡಿ:
  - ಹೀಗೆ ಅಂದರೆ ಏನು?
  - ಅಂಗವೈಕಲ್ಯತೆ ಹೊಂದಿರುವ ಯಾವುದಾದರೂ ಮಕ್ಕಳನ್ನು ನೋಡಿದ್ದೀರಾ?
  - ಇತರರಿಗಿಂತ ಅವರು ಹೇಗೆ ಭಿನ್ನವಾಗಿದ್ದಾರೆ?
  - ಇತರರಂತೆ ಎಲ್ಲಾ ಚಟುವಟಿಕೆಗಳನ್ನು ಅವರು ಮಾಡುತ್ತಾರೆಯೇ? ಹೇಗೆ?
- ಚರ್ಚೆಯ ನಂತರ ಪ್ರತಿ ಗುಂಪಿನಿಂದ ಒಬ್ಬರು ತಮ್ಮ ಗುಂಪಿನ ಚರ್ಚೆಯ ಅಂಶಗಳನ್ನು ಹಂಚಿಕೊಳ್ಳಲು ತಿಳಿಸಿ.
  - ಮೇಲಿನ ವಿವರಗಳುಳ್ಳ ಕಾರ್ಡುಗಳನ್ನು ಆಯಾ ಗುಂಪಿಗೆ ಕೊಡಿ. ಪ್ರತಿ ಗುಂಪಿನವರು ಒಬ್ಬರ ನಂತರ ಒಬ್ಬರು ವಿವರಗಳನ್ನು ಜೋರಾಗಿ ಓದಲು ತಿಳಿಸಿ.
  - ದುರ್ಬಲತೆಯು ವಿಕಲತೆಗೆ ಹೇಗೆ ಕಾರಣವಾಗುತ್ತದೆ ಹಾಗೂ ಪ್ರತಿ ವಿಕಲತೆಯು ಹೇಗೆ ವಿಭಿನ್ನವಾಗಿವೆ ಎಂಬುದರ ಬಗ್ಗೆ ಮಾತನಾಡಿ.
  - ಕಲಿಕಾ ನ್ಯೂನತೆಯು ಇತರೆ ವಿಕಲತೆಗಳಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ಚರ್ಚಿಸಿ?

| ತರಗತಿ 4–5 : | ಅನುಭವ | (60 ನಿಮಿಷಗಳು) |
|---|---|---|

# ನೀವು ನೋಡುವುದನ್ನು ಹೇಳಿ !




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮೇಲೆ ತೋರಿಸಿದಂತೆ ಕೆಲವು ವಾಕ್ಯಗಳನ್ನು ಹಿಂದು ಮುಂದಾಗಿ ಬರೆಯಿರಿ.
- ಪ್ರತಿ ವಾಕ್ಯವನ್ನು ಓದಲು ವಿದ್ಯಾರ್ಥಿಗಳಿಗೆ ತಿಳಿಸಿ. ಮೊದಲನೇ ವಾಕ್ಯ ಓದಿದ ನಂತರವೇ ಮುಂದಿನ ವಾಕ್ಯವನ್ನು ಓದಿಸಿ.
- ಪ್ರತಿ ಮಗುವು ಭಾಗವಹಿಸುವಂತೆ ಪ್ರತಿ ವಿದ್ಯಾರ್ಥಿಯನ್ನು ಪ್ರೋತ್ಸಾಹಿಸಿ.
- ಅವರು ವೇಗವಾಗಿ ಓದಲು ನೆರವಾಗಿ.
- ಮಕ್ಕಳೊಂದಿಗೆ ಕೆಳಕಂಡ ಪ್ರಶ್ನೆಗಳ ಆಧಾರದ ಮೇಲೆ ಚರ್ಚಿಸಿ:
  - ▲ ಹಿಂದುಮುಂದಾಗಿ ಬರೆದಿರುವ ಅಕ್ಷರಗಳನ್ನು ಓದುವಲ್ಲಿ ಆಗುವ ಕಷ್ಟಗಳೇನು?
  - ▲ ಗುಂಪಿನ ನಾಯಕರು ಮಧ್ಯೆ ಮಧ್ಯೆ ಮಾಡುತ್ತಿದ್ದ ಅಡೆತಡೆಗಳಿಂದ ಓದಲು ತೊಂದರೆಯಾಯಿತೇ?
  - ▲ ತರಗತಿಯಲ್ಲಿ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳು ಓದಲು ಪಡುವ ಕಷ್ಟ ಅರ್ಥವಾಯಿತೇ?
  - ▲ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಹೇಗೆ ನೆರವಾಗಬಹುದು?
- ತರಗತಿಯಲ್ಲಿ ಕಂಡುಬರುವ ಭೌತಿಕ ಅಂಗವೈಕಲ್ಯತೆ, ಶ್ರವಣ ನ್ಯೂನತೆ, ದೃಷ್ಟಿಮಾಂದ್ಯತೆ ಮತ್ತು ಕಲಿಕಾ ನ್ಯೂನತೆಯಂತಹ ಇತರೆ ವಿಕಲತೆಗಳನ್ನು ಎದುರಿಸುವ ಕುರಿತು ಚರ್ಚಿಸಿ.

# ಕಥೆಯನ್ನು ರಚಿಸಿ !

ಇಂದು ನಮ್ಮ ಶಾಲೆಗೆ ಹೊಸ ಹುಡುಗನು ದಾಖಲಾದನು. ಅವನು ವೀಲ್ ಚೇರ್ ಮೇಲೆ ಇದ್ದನು ಹಾಗೂ ...........

ನನ್ನ ತಾಯಿಯೊಂದಿಗೆ ಒಂದು ದಿನ ಮಾರ್ಕೆಟ್‌ಗೆ ಹೋಗಿದ್ದೆ. ಅಲ್ಲಿ ಅಂಧ ಮಗುವನ್ನು ನೋಡಿದೆ. ಅವನು......

ರಘುವಿನ ಸ್ನೇಹಿತನು ಓದಲು ಕಷ್ಟಪಡುತ್ತಾನೆ. ಅದಕ್ಕಾಗಿ ರಘು.....

ಜೆನ್ನಿಗೆ ತಂಗಿ ಹುಟ್ಟಿದಾಗ ಖುಷಿಯಾಗಿದ್ದಳು. ಕೆಲವು ದಿನಗಳ ನಂತರ ಕುಟುಂಬಕ್ಕೆ ತಿಳಿದ ವಿಷಯ ಎಂದರೆ ಮಗುವಿಗೆ ಕಿವಿ ಕೇಳುವುದಿಲ್ಲ ಹಾಗೂ .......

ನಿಖಿತಾಳ ನೆರೆ ಮನೆಯವರು ಅಪಘಾತದಲ್ಲಿ ಕೈಯನ್ನು ಕಳೆದುಕೊಂಡರು. ಅವಳು .....

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಮಕ್ಕಳಿಗೆ ಹಾಳೆಗಳನ್ನು ಮತ್ತು ಪೆನ್/ಪೆನ್ಸಿಲ್ ನ್ನು ಒದಗಿಸಿ.
- ಮೇಲೆ ನೀಡಿರುವ ಯಾವುದಾದರೂ ವಾಕ್ಯವನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸಿ. ನಿರೂಪಕರು ಅಂತಹ ಇನ್ನೂ ಹೆಚ್ಚಿನ ವಾಕ್ಯಗಳನ್ನು ನೀಡಬಹುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯ್ದ ಮೇಲ್ಕಂಡ ವಾಕ್ಯದಿಂದ ಪ್ರಾರಂಭವಾಗುವಂತೆ ಕಥೆಯನ್ನು ಬರೆಯಲು ತಿಳಿಸಿ.
- ಅವರ ಅನಿಸಿಕೆ, ಭಾವನೆ ಮತ್ತು ಸಮಾಜದ ಪ್ರತಿಕ್ರಿಯೆ ಇತ್ಯಾದಿಗಳ ಕುರಿತು ಬರೆಯಲು ಪ್ರೇರೇಪಿಸಿ.
- ತಾವು ಬರೆದ ಕಥೆಯನ್ನು ಉಳಿದ ಸ್ನೇಹಿತರೊಂದಿಗೆ ಹಂಚಿಕೊಳ್ಳಲು ತಿಳಿಸಿ.
- ಶಾಲೆಯಲ್ಲಿನ ಎಲ್ಲಾ ಮಕ್ಕಳಿಗೆ ತಾವು ಬರೆದ ಕಥೆಯನ್ನು ಓದಲು ಅವಕಾಶ ನೀಡಿ.

**ತರಗತಿ 6–8 :** **ಅರಿವು** **(60 ನಿಮಿಷಗಳು)**

# ಮೊದಲ ಹೆಜ್ಜೆ – ಸ್ವೀಕರಿಸುವುದನ್ನು ಕಲಿ

ಇದು 10 ವರ್ಷದ ರಾಧಿಕಾಳ ಕಥೆ. ರಾಧಿಕಾಳ ತಾಯಿ ಗೃಹಿಣಿ ಹಾಗೂ ಆಕೆಯ ತಂದೆ ಅಂಗಡಿಯೊಂದನ್ನು ಇಟ್ಟುಕೊಂಡಿದ್ದಾರೆ. ರಾಧಿಕಾ ತನ್ನ ಹೆತ್ತವರ ಮೂರನೇ ಮತ್ತು ಕಿರಿಯ ಮಗು. ಅವಳಿಗೆ ಇಬ್ಬರು ಹಿರಿಯ ಸಹೋದರಿಯರಿದ್ದಾರೆ. ಅವಳು ಜನಿಸುವಾಗ ಇತರ ಸಾಮಾನ್ಯ ಮಕ್ಕಳಂತೆ ಇದ್ದಳು. ಆದರೆ ನಂತರ ಆಕೆಯ ಆರೋಗ್ಯ ಸಮಸ್ಯೆಗಳಿಂದಾಗಿ ಅಂಗವೈಕಲ್ಯತೆ ಉಂಟಾಯಿತು. 6 ನೇ ವಯಸ್ಸಿನಲ್ಲಿ ಅವಳಿಗೆ ನ್ಯುಮೋನಿಯಾ ಬಂದಿದ್ದರಿಂದ ದೃಷ್ಟಿಯ ಮೇಲೆ ಪರಿಣಾಮ ಬೀರಿತು. ಆಕೆ ದೃಷ್ಟಿ ಸಂಪೂರ್ಣವಾಗಿ ಕಳೆದುಕೊಳ್ಳಬಹುದು ಎಂದು ವೈದ್ಯರು ಆಕೆಯ ಪೋಷಕರಿಗೆ ತಿಳಿಸಿದರು. ಆಗ ಪೋಷಕರು ರಾಧಿಕಾಳ ಬಗ್ಗೆ ತುಂಬಾ ಚಿಂತಾಕ್ರಾಂತರಾದರು.

ಮೊದಲಿನಂತೆ ಅವಳ ದೈನಂದಿನ ಚಟುವಟಿಕೆಗಳನ್ನು ಮಾಡಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಅವಳು ದುಃಖದಿಂದ ತನ್ನ ದಿನಗಳನ್ನು ಕಳೆಯುತ್ತಿದ್ದಳು. ಆರಂಭದಲ್ಲಿ ಅವಳು ಮಸುಕಾದ ದೃಷ್ಟಿಯನ್ನು ಹೊಂದಿದ್ದಳು. ಆದರೆ 8 ನೇ ವಯಸ್ಸಿಗೆ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡಳು. ಅವಳ ಶಾಲಾ ಸ್ನೇಹಿತರು ಅವಳ ಪಠ್ಯಪುಸ್ತಕಗಳು, ಪೆನ್ಸಿಲ್‌ಗಳು, ಟಿಫಿನ್ ಇತ್ಯಾದಿಗಳನ್ನು ಮರೆಮಾಚುವ ಮೂಲಕ ಅವಳನ್ನು ಗೇಲಿ ಮಾಡುತ್ತಿದ್ದರು. ಆಕೆಯ ಪೋಷಕರು ಅವಳನ್ನು ಸಮನ್ವಯ ಶಾಲೆಗೆ ಸೇರಿಸಲು ಹಲವಾರು ಶಾಲೆಗಳನ್ನು ಸಂಪರ್ಕಿಸಿದರೂ ವಿಫಲರಾದರು. ಮಗುವಿಗೆ ಸಮನ್ವಯ ಶಾಲೆ

ದೊರಕದಿದ್ದರಿಂದ ಪೋಷಕರು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಅವಳಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಿಸಬೇಕೆಂದು ಬಯಸಿದರೂ ಅವಳ ಕಲಿಕೆಗೆ ಅನುಕೂಲವಾಗುವಂತಹ ಸೌಲಭ್ಯಗಳು ಮತ್ತು ಸಮನ್ವಯ ಸ್ನೇಹಿ ವಾತವರಣವಿರುವ ಶಾಲೆ ಸಮಾಜದಲ್ಲಿ ಇರಲಿಲ್ಲ. ಅವಳು ತನ್ನ ಮನೆಯ ಹೊರಗೆ ಏಕಾಂಗಿಯಾಗಿ ಹೋಗಲು ಅಥವಾ ಅವಳ ಸ್ನೇಹಿತರೊಂದಿಗೆ ಆಟವಾಡಲು ಸಾಧ್ಯವಾಗಲಿಲ್ಲ. ಅಂಥ ಮಗುವನ್ನು ಪಡೆಯಲು ಪೋಷಕರು ಕೆಲವು ಪಾಪಗಳನ್ನು ಮಾಡಿರಬೇಕು ಎಂದು ಕೆಲವರು ಹೇಳುತ್ತಿದ್ದರು. ಅವಳ ಸ್ನೇಹಿತರೂ ಸಹ ಅವಳನ್ನು ಭೇಟಿ ಮಾಡಲು ಬರುತ್ತಿರಲಿಲ್ಲ.

ಸುಮಾರು ಒಂದು ವರ್ಷದ ನಂತರ ಆಕೆಯ ಪೋಷಕರು ಹೊಸ ಶಾಲೆಯಲ್ಲಿ ಅವಳನ್ನು ದಾಖಲಿಸಿದರು. ಅಧ್ಯಾಯಗಳನ್ನು ಗಟ್ಟಿಯಾಗಿ ಓದಲು ತನ್ನ ಹೊಸ ಸ್ನೇಹಿತರಿಂದ ಸಹಕಾರ ಪಡೆದಳು. ಅವಳ ಶಿಕ್ಷಕರು ಉಪನ್ಯಾಸಗಳನ್ನು ರೆಕಾರ್ಡ್ ಮಾಡಿ ಅವಳಿಗೆ ನೀಡುತ್ತಿದ್ದರು. ಅವಳು ಇತ್ತೀಚೆಗೆ ಶಾಲಾ ಮಟ್ಟದ ಕಬಡ್ಡಿಯಲ್ಲಿ ಭಾಗವಹಿಸಿದಳು ಹಾಗೂ ಅವಳ ತಂಡವು ಗೆದ್ದಿತು. ಅವಳಿಗೆ ಸಹಕಾರ ನೀಡಲು ಮತ್ತು ಸಹಭಾಗಿತ್ವದಿಂದ ಎಲ್ಲಾ ಆಟಗಾರರು ತಮ್ಮ ಪಾದದ ಸುತ್ತಲೂ ಗಂಟೆ ಧರಿಸುತ್ತಿದ್ದರು. ಅವಳು ಈಗ ತುಂಬಾ ಸಂತೋಷವಾಗಿದ್ದಾಳೆ ಮತ್ತು ಚೆನ್ನಾಗಿ ಕಲಿಯುತ್ತಿದ್ದಾಳೆ.

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**


- ಮೇಲಿನ ಘಟನೆಯ ಪ್ರತಿಯನ್ನು ಎಲ್ಲಾ ಗುಂಪುಗಳಿಗೆ ಹಂಚಿ. ಕಥೆಯನ್ನು ಓದಲಿ.
- ಇಬ್ಬರ ಜೋಡಿಯನ್ನು ಮಾಡಿ ಕಥೆಯ ಬಗ್ಗೆ ಅನಿಸಿಕೆಗಳನ್ನು ಪರಸ್ಪರ ಹಂಚಿಕೊಳ್ಳಲು ತಿಳಿಸಿ
- ಎಲ್ಲಾ ಗುಂಪುಗಳೊಂದಿಗೆ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ.
  - ರಾಧಿಕಾಳ ಕುಟುಂಬಕ್ಕೆ ಹೇಗೆ ಪರಿಣಾಮ ಬೀರಿತು?
  - ನೀವು ಬೆಳೆದ ನಂತರವೂ ವಿಕಲತೆ ಉಂಟಾಗುತ್ತದೆಯೇ?
  - ದೊಡ್ಡವರಾಗುತ್ತಿದ್ದಂತೆ ಎಂತಹ ವೈಕಲ್ಯತೆ ಉಂಟಾಗಬಹುದು?
  - ಶಾಲೆಯವರು ಅವಳನ್ನು ದಾಖಲು ಮಾಡಿಕೊಳ್ಳಲು ಏಕೆ ಒಪ್ಪಲಿಲ್ಲ?
  - ನಿಮ್ಮ ಶಾಲೆಯನ್ನು ರಾಧಿಕಾಳಂತಹ ಮಕ್ಕಳಿಗೆ ಸಿದ್ಧಗೊಳಿಸಬಹುದೇ?
  - ಹೊಸ ಶಾಲೆಯು ರಾಧಿಕಾಳನ್ನು ಹೇಗೆ ದಾಖಲಿಸಿಕೊಂಡಿತು?
- ವಿಶೇಷ ಅಗತ್ಯತೆ ಯುಳ್ಳ ಮಕ್ಕಳಿಗೆ ಸಾಮಾಜಿಕ ಅಡೆತಡೆಗಳ ಕುರಿತು ಪ್ರಶ್ನೆಗಳನ್ನು ಕೇಳುವ ಮೂಲಕ ಚರ್ಚೆಯನ್ನು ನಡೆಸಿ.
- ಎಲ್ಲಾ ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ. ಎಲ್ಲರ ಉತ್ತರಗಳನ್ನು ಪಡೆಯಿರಿ.

# ನಿಮ್ಮ ಶಾಲೆಯು ಸಮನ್ವಯ ಶಿಕ್ಷಣ ಸ್ನೇಹಿಯಾಗಿದೆಯೇ?

ತರಗತಿಗಳಿಗೆ ಹೋಗುವ ದಾರಿಯಲ್ಲಿ ತಗ್ಗುಗುಂಡಿಗಳು, ಕಲ್ಲುಗಳಂತಹ ಅಪಾಯಕರ ವಸ್ತುಗಳಿಲ್ಲವೇ?

ವೀಲ್ ಚೇರ್ ಗಳು ತೆಗೆದುಕೊಂಡು ಹೋಗುವಷ್ಟು ಬಾಗಿಲುಗಳು ಅಗಲವಾಗಿವೆಯೇ?

ವೀಲ್ ಚೇರ್ ಬಳಸುವ ವಿದ್ಯಾರ್ಥಿಯು ಮೆಟ್ಟಿಲುಗಳಿಲ್ಲದೇ ತರಗತಿಗಳನ್ನು ಅಥವಾ ಶಾಲೆಯ ಎಲ್ಲ ಸೌಲಭ್ಯಗಳನ್ನು ಬಳಸಬಹುದೇ ?



ಶೌಚಾಲಯಗಳು ವಿಕಲಾಂಗ ಸ್ನೇಹಿಯಾಗಿವೆಯೇ?

ಶಾಲೆಯಲ್ಲಿ ಇಳಿಜಾರು ಇದ್ದು ಕೈಹಳಿಗಳು ಇವೆಯೇ?

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು 3–4 ಗುಂಪುಗಳಾಗಿ ವಿಂಗಡಿಸಿ.
- ಮೇಲೆ ಒದಗಿಸಲಾದ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಹೇಳಿ.
- ಶಾಲೆಯ ಸುತ್ತಲೂ ಹೋಗಿ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಪ್ರವೇಶಿಸಲು ತೊಂದರೆ ಇರುವ ಸ್ಥಳಗಳನ್ನು ಹುಡುಕಲು ಹೇಳಿ
- ತರಗತಿಯ ಅಭ್ಯಾಸಗಳನ್ನು ಸಹ ಪರೀಕ್ಷಿಸಲು ತಿಳಿಸಿ.
- 30 ನಿಮಿಷಗಳು ಚಟುವಟಿಕೆ ಮಾಡಿ ನಂತರದ 30 ನಿಮಿಷಗಳನ್ನು ಚರ್ಚೆಗೆ ಬಳಸಿ.
    - ಕೆಳಕಂಡ ಪ್ರಶ್ನೆಗಳನ್ನು ಆಧರಿಸಿ ಚರ್ಚೆ ನಡೆಸಿ.
    - ನಿಮ್ಮ ಶಾಲೆಯನ್ನು ವಿಕಲಾಂಗ ಸ್ನೇಹಿ ಮಾಡುವುದು ಹೇಗೆ?
    - ತರಗತಿಯಲ್ಲಿನ ಮೇಜು ಕುರ್ಚಿಗಳಿಂದ ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆಯೇ?
    - ದೃಷ್ಟಿನ್ಯೂನತೆ ಹೊಂದಿರುವ ಮಕ್ಕಳಿಗೆ ಶಾಲೆಯಲ್ಲಿ ಯಾವ ರೀತಿಯ ಸೌಲಭ್ಯಗಳ ಅವಶ್ಯಕತೆ ಇದೆ?
- ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಎಂತಹ ತರಗತಿ ಚಟುವಟಿಕೆಗಳನ್ನು ಒದಗಿಸಬೇಕು?
- ಶಿಕ್ಷಕರು ಮಕ್ಕಳೊಂದಿಗೆ ಕೆಳಕಂಡ ಪ್ರಶ್ನೆಗಳನ್ನು ಆಧರಿಸಿ ಚರ್ಚಿಸಬೇಕು:
    - ವಿಕಲಾಂಗತೆಯು ಜೈವಿಕ ಅಂಶಕ್ಕಿಂತಲೂ ಸಾಮಾಜಿಕ ಸಂರಚನೆಯಿಂದ ಉಂಟಾಗಿರುವುದೇ?
    - ಶಾಲೆಯ ವಾತಾವರಣದಲ್ಲಿ ವಿಕಲಾಂಗ ಸ್ನೇಹಿ ವಾತಾವರಣವನ್ನು ಹೇಗೆ ತರಬಹುದು?

ತರಗತಿ 6–8 : ಅವಲೋಕನ (60 ನಿಮಿಷಗಳು)

# ಬಣ್ಣವನ್ನು ಬಳಸೋಣ

ಅಂಗವೈಕಲ್ಯತೆಯು ವೈವಿಧ್ಯಮಯ

ಅಂಗವೈಕಲ್ಯತೆಯನ್ನು ಒಪ್ಪಿಕೊಂಡರೆ ಮುಖದಲ್ಲಿ ಮುಗುಳ್ನಗೆ ಬರುತ್ತದೆ

ಅಂಗವೈಕಲ್ಯತೆಯು ಮಗುವಿನ ಸಾಧನೆಗೆ ಸಮಸ್ಯೆಯಲ್ಲ

ಅಂಗ ವೈಕಲ್ಯತೆಯನ್ನು ಸಮನ್ವಯ ಶಿಕ್ಷಣದಿಂದ ಎದುರಿಸೋಣ

ಅಂಗ ವೈಕಲ್ಯತೆಯು ಸಾಧ್ಯತೆಯಷ್ಟೇ

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಜೋಡಿಗಳಾಗಿ ವಿಂಗಡಿಸಿ.
- ವಿದ್ಯಾರ್ಥಿಗಳಿಗೆ ಚಾರ್ಟ್ ಹಾಳೆಗಳನ್ನು ಮತ್ತು ಪೆನ್ / ಪೆನ್ಸಿಲ್ / ಕ್ರೆಯೋನ್ / ಸ್ಕೆಚ್ ಪೆನ್‌ಗಳನ್ನು ಒದಗಿಸಿ.
- ಪ್ರತಿ ಜೋಡಿಯು ಮೇಲೆ ತಿಳಿಸಿದ ಥೀಮ್‌ಗಳಿಂದ ಒಂದು ನಿರ್ದಿಷ್ಟ ಥೀಮ್ ಆಯ್ಕೆ ಮಾಡಲು ಹೇಳಿ. ಅಂತಹ ಹೆಚ್ಚಿನ ವಿಷಯಗಳನ್ನು ನಿರೂಪಕರು ಸೂಚಿಸಬಹುದು.
- ಥೀಮ್‌ನಲ್ಲಿ ಸಂದೇಶವನ್ನು ತಲುಪಿಸುವ ಪೋಸ್ಟರ್ ತಯಾರಿಸಲು ಹೇಳಿ.
- ಸುಲಭವಾಗಿ ಅರ್ಥವಾಗುವ ದೃಷ್ಟಾಂತಗಳು ಮತ್ತು ಘೋಷಣೆಗಳನ್ನು ಬಳಸಲು ಅವರನ್ನು ಪ್ರೋತ್ಸಾಹಿಸಿ.
- ಚಟುವಟಿಕೆಯ ನಂತರ ಉಳಿದ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲು ತಿಳಿಸಿ.
- ಹೀಗೆ ತಯಾರಿಸಿದ ಪೋಸ್ಟರ್‌ಗಳನ್ನು ಶಾಲೆಯ ಎಲ್ಲಾ ಮಕ್ಕಳು ವೀಕ್ಷಿಸುವಂತೆ ಪ್ರದರ್ಶಿಸಿ.



ಕಣ್ಣಿಗೆ ಕಂಡದ್ದೆಲ್ಲಾ ನುಣ್ಣಗಿರುವುದಿಲ್ಲ.

## ಪ್ರತಿಜ್ಞೆ



ಸಮಾಜದಲ್ಲಿ, ಅದರಲ್ಲೂ ಶಾಲೆಗಳ ತರಗತಿ ಕೋಣೆಗಳಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ, ಇತರೆ ವಿದ್ಯಾರ್ಥಿಗಳು ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಪರಸ್ಪರ ತೊಡಗಿಸಿಕೊಳ್ಳುವಂತೆ ಅವಕಾಶಗಳನ್ನು ಸೃಷ್ಟಿಸಬೇಕಿದೆ. ಉತ್ತಮ ಪ್ರಜೆಯಾಗಿ ಸಮಾಜದಲ್ಲಿ ಸಮಾನತೆಯನ್ನು ತರುವಲ್ಲಿ ಶ್ರಮಿಸುವೆವೆಂದು ಪ್ರತಿಜ್ಞೆ ಮಾಡೋಣ.

- ಸಮಾಜದಲ್ಲಿನ ದೈಹಿಕ ಅಂಗವೈಕಲ್ಯತೆ, ಶ್ರವಣ ನ್ಯೂನತೆ, ಮಾತು ಮತ್ತು ಭಾಷಾ ಸಂವಹನ ನ್ಯೂನತೆ,ದೃಷ್ಟಿ ನ್ಯೂನತೆ ಮತ್ತುನಿರ್ದಿಷ್ಟ ಕಲಿಕಾ ನ್ಯೂನತೆಯಂತಹ ಇತರೆ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಮರ್ಪಕ ಸಹಾಯ ಮಾಡುತ್ತೇನೆ.
- ಶಾಲೆಯಲ್ಲಿ ಮತ್ತು ತರಗತಿಯಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಬೇಕಾಗಿರುವುದು ಅವಕಾಶವೇ ಹೊರತು ಅನುಕಂಪವಲ್ಲ. ಆದ್ದರಿಂದ ಅವರಿಗೆ ಅವಕಾಶಗಳನ್ನು ಒದಗಿಸಲು ಪ್ರಯತ್ನಿಸುತ್ತೇನೆ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗೇಲಿ ಮಾಡದೇ ಅಥವಾ ಛೇಡಿಸದೇ ಅವರಿಗೆ ಪ್ರೀತಿ, ಕಾಳಜಿ ಮತ್ತು ಗೌರವವನ್ನು ನೀಡುತ್ತೇನೆ ಹಾಗೂ ಇತರ ಸ್ನೇಹಿತರು ಹಾಗೂ ಕುಟುಂಬದವರಿಗೂ ಈ ಅರಿವನ್ನು ಮೂಡಿಸುತ್ತೇನೆ.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅವಶ್ಯಕವಾಗಿರುವ ಸೌಲಭ್ಯಗಳನ್ನು ಒದಗಿಸಲು ಶಾಲಾ ಆಡಳಿತ ಹಾಗೂ ಗ್ರಾಮ/ಜಿಲ್ಲಾಡಳಿತದವರು ನೆರವು ನೀಡುವಂತೆ ಕೋರುತ್ತೇನೆ.

**ಸಲಹಾತ್ಮಕ ಚಟುವಟಿಕೆಗಳು :**

ಸಮಾಜದಲ್ಲಿ ಜಾತಿ, ವರ್ಗ, ಧರ್ಮ, ಬಡತನ ಮುಂತಾದವುಗಳನ್ನು ಆಧರಿಸಿದ ಬೇಧ ನೀತಿಗಳನ್ನು ನಿಯಂತ್ರಿಸಲು ಸಾಕಷ್ಟು ಸುಧಾರಣೆಗಳನ್ನು ಕೈಗೊಂಡಿದ್ದರೂ ಅಂಗವೈಕಲ್ಯತೆ ಹೊಂದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಗುರುತರ ಜವಾಬ್ದಾರಿಯೂ ನಮ್ಮ ಮೇಲಿದೆ.

1. ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಬೇಕಾಗಿರುವ ಸಾಮಗ್ರಿಗಳನ್ನು ಪಟ್ಟಿ ಮಾಡಿ.
2. ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸರ್ಕಾರದಿಂದ ನೀಡುವ ಸಹಾಯವನ್ನು ಕೇಳಿ ತಿಳಿದುಕೊಳ್ಳಿ.
3. ನಿಮ್ಮ ಶಾಲೆಯು ಅಂತಹ ಮಕ್ಕಳಿಗೆ ಸೌಲಭ್ಯಗಳನ್ನು ನೀಡುತ್ತಿದ್ದೀರಾ .... ಈ ಸೌಲಭ್ಯಗಳನ್ನು ಪಟ್ಟಿ ಮಾಡಿ.



ಮಕ್ಕಳ
ಶೋಷಣೆ
ತಡೆಗಟ್ಟಿ
ಸುರಕ್ಷಿತ
ಮತ್ತು
ಅಸುರಕ್ಷಿತ ಸ್ಪರ್ಶಗಳಲ್ಲಿನ
ವ್ಯತ್ಯಾಸದ ಬಗ್ಗೆ
ನಿಮ್ಮ ಮಗುವಿಗೆ ಕಲಿಸಿರಿ
dont touch
dont touch
dont touch
dont touch
ಸಂಪರ್ಕಿಸಿ:
1098
ಮಕ್ಕಳ ಸಹಾಯವಾಣಿ
ಅವಳ ಶರೀರಕ್ಕೆ ಅವಳೆ ಒಡತಿ
ಶರೀರದ ಭದ್ರತೆ ಮತ್ತು
ಘನತೆ ಅವಳ ಹಕ್ಕು
ಬಹುಪಾಲು ಶೋಷಿತರು
ಪರಿಚಿತರೇ ಆಗಿರುತ್ತಾರೆ.
ಅವರು ಬಹುಶಃ 'ಒಳ್ಳೆಯ' ಸ್ನೇಹಿತರು
ಅಥವಾ 'ಗೌರವಿಸುವ' ಹಿರಿಯರಾಗಿರುತ್ತಾರೆ.
ಯಾವುದೇ ಸಂಬಂಧಕ್ಕಿಂತ ನಿಮ್ಮ
ಮಗುವಿನ ಸುರಕ್ಷತೆ ಬಹಳ ಮುಖ್ಯ
enfold
ಭದ್ರತೆಯ ವಾತಾವರಣ ನಿರ್ಮಿಸೋಣ
www.enfoldindia.org
info@enfoldindia.org
+91 99000 94251